ಒದಗಿಸಿಕೊಟ್ಟಿದ್ದಾರೆ. ಈ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸದೆ ಇಲ್ಲಿ ಉತ್ತರ ಕೊಟ್ಟಿದ್ದಾರೆ. ಅಲ್ಲದೆ ಪೂರ್ಣಯ್ಯನವರ ಮೊಮ್ಮಗ ಇವರ ಬಗ್ಗೆ ಹೈಕೋರ್ಟ್‌ನಲ್ಲಿ ದಾವೆ ಹೂಡಿ ನನಗೂ ಅದರಲ್ಲಿ ಪಾಲು ಬರಬೇಕೆಂದು ಹೇಳಿ ನ್ಯಾಯಾಲಯದಲ್ಲೂ ಇದು ಇತ್ಯರ್ಥವಾಗಿದೆ.

ಶ್ರೀ ಡಿ. ಮಂಜುನಾಥ್ :— ದಾಖಲೆಗಳಲ್ಲಿ ಫಾರೆಸ್ಟ್ ಜಮೀನು ಅಂತ ಇಲ್ಲ, ಮುಜರಾಯಿ ಜಮೀನು ಅಂತಲೇ ಇದೆ. ದಿವಂಗತ ಪೂರ್ಣಯ್ಯಮವರ ಕಾಲದಲ್ಲಿ ಅದನ್ನು ಕೊಡಲಾಗಿತ್ತು ಅಂತ ಹೇಳುತ್ತಿದ್ದಾರೆ. ಇನ್ನೊಂದು ಸಲ ನಾನು ಅದನ್ನು ನೋಡುತ್ತೇನೆ.

ಅಧ್ಯಕ್ಷರು :— 1911ರಲ್ಲಿ ಮಾನ್ಯ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಪೂರ್ಣಯ್ಯನವರು ರಿಟೈರಾದಾಗ ಇಡೀ ಯಳಂದೂರು ತಾಲೂಕನ್ನು ಜಾಹಗೀರು ಕೊಟ್ಟರು. 1912ರಲ್ಲಿ ಪೂರ್ಣಯ್ಯ ಸತ್ತರು. ರೆಕಾರ್ಡ್ಸ್ ತರಿಸಿ ನೋಡಿ. ಈ ಪ್ರಶ್ನೆಯನ್ನು ತಡೆಹಿಡಿಯಲೇ?

ಶ್ರೀ ಡಿ. ಮಂಜುನಾಥ್ :— ಬೇಕಾಗಿಲ್ಲ.

ಅಧ್ಯಕ್ಷರು :— ಆಯಿತು. ಮುಂದಿನ ಪ್ರಶ್ನೆ ಮಾನ್ಯ ಕಾರ್ಜೋಳರದು, ಅದು ಮಾನ್ಯ ಆರೋಗ್ಯ ಸಚಿವರಿಗೆ ಹೋಗಿದೆ, ಅವರ ಪ್ರಶ್ನೋತ್ತರ ಇದ್ದ ದಿವಸ ಅದನ್ನು ಹಾಕಿಕೊಳ್ಳುತ್ತೇನೆ.

ನೆಡುತೋಪುಗಳು.

352(2320) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯಾಭಿವೃದ್ಧಿ ನಿಗಮದಿಂದ ಕಳೆದ 3 ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ನೆಡುತೋಪು ಬೆಳೆಸಿದ ಜಮೀನಿನ ವಿಸ್ತೀರ್ಣವೆಷ್ಟು? ಪ್ರತಿ ವರ್ಷ ಇದಕ್ಕಾಗಿ ಖರ್ಚು ಮಾಡಿದ ಹಣ ಎಷ್ಟು; ಜಿಲ್ಲೆಯ ಯಾವ ಸ್ಥಳದಲ್ಲಿ ಈ ನೆಡುತೋಪನ್ನು ಬೆಳೆಸಲಾಗಿದೆ;

ಆ) ಆ ಬಗ್ಗೆ ಉಪಯೋಗಿಸಿದ ಹಣವನ್ನು ಯಾವ ಸಂಸ್ಥೆಯಿಂದ ಪಡೆಯಲಾಗಿದೆ; ಅವರ ಮೊಬಲಗೆಷ್ಟು

ಇ) ಈ ಹಣಕ್ಕೆ ಪ್ರತಿವರ್ಷ ಕೊಡುವ ಬಡ್ಡಿ ಹಣವೆಷ್ಟು?

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :—

ಅ) ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ (ನಿ) ದ ಶಿವಮೊಗ್ಗ ಜಿಲ್ಲೆಯಲ್ಲಿ 1996 ರಿಂದ 1998ರ ಮೂರು ವರ್ಷಗಳಲ್ಲಿ ಒಟ್ಟು 1685.31 ಹೆಕ್ಟೇರ್‌ನಷ್ಟು ನೆಡುತೋಪುಗಳನ್ನು ಬೆಳೆಸಲಾಗಿದೆ.

ಪ್ರತಿವರ್ಷ ಇದಕ್ಕಾಗಿ ಮಾಡಿದ ಖರ್ಚು

1996 ರೂ.160.06 ಲಕ್ಷಗಳು

1997 ರೂ.192.66 ಲಕ್ಷಗಳು

1998 ರೂ. 14.50 ಲಕ್ಷಗಳು

ಶಿವಮೊಗ್ಗ ಜಿಲ್ಲೆಯ ಈ ಕೆಳಕಂಡ ತಾಲ್ಲೂಕುಗಳಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ.

1) ತೀರ್ಥಹಳ್ಳಿ
2) ಶಿವಮೊಗ್ಗ
3) ಸಾಗರ
4) ಸೊರಬ
5) ಹೊಸನಗರ
6) ಶಿಕಾರಿಪುರ

ವಿವರಣಾ ಪಟ್ಟಿಯನ್ನು ಲಗತ್ತಿಸಿದೆ.

ಅ) ಪಲ್ಪ್ ವುಡ್ ಪ್ರಾಯೋಜನೆಗೆ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	ರೂ.122.63 ಲಕ್ಷಗಳು
ಮಹಾರಾಷ್ಟ್ರ ಬ್ಯಾಂಕಿನಿಂದ	ರೂ.30.66 ಲಕ್ಷಗಳು
ಒಟ್ಟು	ರೂ.153.29 ಲಕ್ಷಗಳು.

ಒಟ್ಟು ವೆಚ್ಚವಾದ ರೂ. 367.22 ಲಕ್ಷ ಇದರಲ್ಲಿ ರೂ.153.29 ಲಕ್ಷವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಮಹಾರಾಷ್ಟ್ರ ಬ್ಯಾಂಕ್‌ಗಳಿಂದ ಇತ್ತೀಚೆಗೆ ಮಾರ್ಚ್ 1999 ರಲ್ಲಿ ಪಡೆಯಲಾಗಿದೆ. ಬಾಕಿ ರೂ. 213.95 ಲಕ್ಷವನ್ನು ನಿಗಮದ ಆಂತರಿಕ ಸಂಪನ್ಮೂಲಗಳಿಂದ ವೆಚ್ಚಮಾಡಿದ್ದು, ಈ ಹಣವನ್ನು ಬ್ಯಾಂಕ್‌ಗಳಿಂದ ಇನ್ನೂ ಪಡೆಯಬೇಕಿರುತ್ತದೆ.

ಆ) ಪ್ರತಿ ವರ್ಷ ಶೇಕಡ 14.5 ರಂತೆ ಬಡ್ಡಿ ರೂ. 22,22,705.00 ರೂಗಳ ಸಾಲದ ಹಣವನ್ನು ಮರುಪಾವತಿ ಮಾಡುವ ವರ್ಷದವರೆಗೆ (2000) ನೀಡಬೇಕಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ನಿಗಮದ ವತಿಯಿಂದ ಬೆಳೆಸಿದ ನೆಡುತೋಪುಗಳ ಸ್ಥಳ ಮತ್ತು ವಿಸ್ತೀರ್ಣಗಳ ವಿವರಗಳು

ಕ್ರ.ಸಂ.	ನೆಡುತೋಪು ಬೆಳೆಸಿದ ಸ್ಥಳ	ತಾಲ್ಲೂಕು	ವಿಸ್ತೀರ್ಣ (ಹೆ.ಗಳಲ್ಲಿ)
	1. ಪ್ರಾಯೋಜನೆಯ ಹೆಸರು ಮೆದುಮರ (ಪಲ್ಪ್ ವುಡ್)		
	1996ನೇ ಸಾಲಿನ ನೆಡುತೋಪು		
1)	ಅಡೂರು	ಸಾಗರ	76.00
2)	ತರಳಘಟ್ಟೆ	ಶಿಕಾರಿಪುರ	68.00
3)	ಗುಡ್ಡದಹೊಸಳ್ಳಿ	ಸೊರಬ	85.50
4)	ಮುದ್ದಿನಕೊಪ್ಪ	ಶಿವಮೊಗ್ಗ	103.00
			330.50
	1997ನೇ ಸಾಲಿನ ನೆಡುತೋಪು		
1)	ಬಸವಾಪುರ	ಶಿವಮೊಗ್ಗ	21.00
2)	ಸುತ್ತುಕೋಟೆ	ಶಿವಮೊಗ್ಗ	61.00
3)	ಗುಡ್ಡಿನಕೊಪ್ಪ	ಶಿವಮೊಗ್ಗ	75.00
4)	ಕೋಡೂರು	ಹೊಸನಗರ	78.00
5)	ಗಂಗವ್ವನಸರ	ಶಿಕಾರಿಪುರ	42.00
6)	ಕೊಂಟಿಕೆರೆ	ಸೊರಬ	29.00
7)	ದೇವಿಕೊಪ್ಪ	ಶಿಕಾರಿಪುರ	61.50
8)	ಗುಡ್ಡದಹೊಸಳ್ಳಿ	ಸೊರಬ	5.80
			365.30
	1998ನೇ ಸಾಲಿನ ನೆಡುತೋಪು		
1)	ಬಿಕ್ಕೋನಹಳ್ಳಿ	ಶಿವಮೊಗ್ಗ	7.00.
2)		ಸೊರಬ	41.00
3)	ಕಾಳೇನಹಳ್ಳಿ	ಶಿಕಾರಿಪುರ	1.50
4)	ನೆರಟೂರು	ತೀರ್ಥಹಳ್ಳಿ	23.10
			72.60
		ಒಟ್ಟು	768.40

1	2	3	4
II.	ಪ್ರಯೋಜನೆಯ ಹೆಸರು: ಗಿರಿಶೃಂಗ ಮೆದುಮರ		
	1996ನೇ ಸಾಲಿನ ನೆಡುತೋಪು		
1)	ನೆರಾಟೂರು	ತೀರ್ಥಹಳ್ಳಿ	58.30
2)	ಮೃಗವಧೆ	ತೀರ್ಥಹಳ್ಳಿ	30.20
3)	ಘನಸಾಲೆ	ತೀರ್ಥಹಳ್ಳಿ	24.30
4)	ಭಾರತೀಪುರ	ತೀರ್ಥಹಳ್ಳಿ	32.50
5)	ನೆಟ್ಟೂರು	ತೀರ್ಥಹಳ್ಳಿ	32.00
6)	ಪೌಡಳ್ಳಿ	ತೀರ್ಥಹಳ್ಳಿ	30.00
7)	ಬಿ.ಹೆಚ್.ಮಟ	ತೀರ್ಥಹಳ್ಳಿ	14.10
8)	ಮುಳಬಾಗಿಲು	ತೀರ್ಥಹಳ್ಳಿ	17.20
9)	ಅರಳಾಪುರ	ತೀರ್ಥಹಳ್ಳಿ	66.90
			365.50
	1999ನೇ ಸಾಲಿನ ನೆಡುತೋಪು		
1.	ಶಂಕರಾಪುರ	ತೀರ್ಥಹಳ್ಳಿ	29.00
2.	ಅರಳನುರು	ತೀರ್ಥಹಳ್ಳಿ	22.00
3.	ಹೊಸೇಬೈಲು	ತೀರ್ಥಹಳ್ಳಿ	26.20
4.	ಸರಟೂರು	ತೀರ್ಥಹಳ್ಳಿ	38.00
5.	ಮಿಟ್ಲಗೋಡು	ತೀರ್ಥಹಳ್ಳಿ	40.00
6)	ದವಿದಕ ಕಡೆಗದ್ದೆ	ತೀರ್ಥಹಳ್ಳಿ	18.00
7)	ಮೃಗವದೆ	ತೀರ್ಥಹಳ್ಳಿ	34.55
8)	ಪಣಬಂದೂರು	ತೀರ್ಥಹಳ್ಳಿ	40.40
9)	ಕುಕ್ಕಳೆಲೆ	ತೀರ್ಥಹಳ್ಳಿ	34.55
		ಒಟ್ಟು	300.60

1	2	3		4
III.	ಪ್ರಾಯೋಜನೆಯ ಹೆಸರು: ತೇಗ			
	1997ನೇ ಸಾಲಿನ ನೆಡುತೋಪು			
1.	ಬರ್ಮೆ (ಅರನಾಳು)	ಶಿವಮೊಗ್ಗ		45.48
2.	ಬಹವಾಪುರ	ಶಿವಮೊಗ್ಗ		39.00
3.	ಮಳಲಿ ಸಾಗರ	ಶಿವಮೊಗ್ಗ		14.00
4.	ದೇವಿ ಹೊಸನಗರ	ಶಿವಮೊಗ್ಗ		34.03
5.	ಶರ್ಮನಾಮತಿ	ಹೊಸನಗರ		33.00
6.	ಚಿಕ್ಕನವಿ	ಸೊರಬ		37.00
7.	ದೇವಿಕೊಪ್ಪ	ಸೊರಬ		10.00
			ಒಟ್ಟು	198.48
IV.	ಪ್ರಾಯೋಜನೆಯ ಹೆಸರು: ಬೊಂಬು			
	1996ನೇ ಸಾಲಿನ ನೆಡುತೋಪು			
1.	ಶರಭಘಟ್ಟ	ಶಿಕಾರಿಪುರ		31.00
2.	ಜಂಬೂರು	ಶಿಕಾರಿಪುರ		35.63
				66.63
	1997ನೇ ಸಾಲಿನ ನೆಡುತೋಪು ಮಾರಿಹಾಳ: ಬಿದಿರು			
1.	ಬಸವಾಪುರ	ಶಿವಮೊಗ್ಗ		10.00
2.	ಮಳಲಿ	ಸಾಗರ		8.00
3.	ಅಬ್ಬಲಗೆರೆ	ಶಿವಮೊಗ್ಗ		1.20
				19.20
	1998ನೇ ಸಾಲಿನ ನೆಡುತೋಪು			
	ಚಿಕ್ಕೋನಹಳ್ಳಿ	ಶಿವಮೊಗ್ಗ		6.50
			ಒಟ್ಟು	25.70

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ಈ ಅರಣ್ಯ ಅಭಿವೃದ್ಧಿ ನಿಗಮ ಶಿವಮೊಗ್ಗ ಜಿಲ್ಲೆಯಲ್ಲಿ ಮಾಡಿರುವ ನೆಡುತೋಪುಗಳ ಬಗ್ಗೆ ನನ್ನ ಪ್ರಶ್ನೆ ಇದೆ. ಬ್ಯಾಂಕ್‌ಗಳಿಂದ, ಬೇರೆ ಬೇರೆ ಮೂಲಗಳಿಂದ 14½ ಪರ್ಸೆಂಟ್ ಬಡ್ಡಿ ಕೊಟ್ಟು ಸಾಲ ತಂದು ಅರಣ್ಯ ಅಭಿವೃದ್ಧಿಪಡಿಸುತ್ತಿದ್ದಾರೆ. ಎರಡು ಮೂರು ವರ್ಷಗಳ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ಒಳ್ಳೆಯ ಅಧಿಕಾರಿಯನ್ನು ನೇಮಿಸಿದ್ದನ್ನು ಬಿಟ್ಟರೆ ಬೇರೇನು ಕೆಲಸ ನಿಗಮ ಮಾಡಲಿಲ್ಲ, ಅದಕ್ಕೆ ಸರ್ಕಾರವೂ ಪ್ರೋತ್ಸಾಹ ಕೊಡಲಿಲ್ಲ, ನಮ್ಮ ಜಿಲ್ಲೆಯಲ್ಲಿ ಬೇರೆ ಬೇರೆ ಸಂಸ್ಥೆಗಳು ಬೆಳೆಸಿರುವ ಅರಣ್ಯಕ್ಕೂ ಮತ್ತು ನಿಮ್ಮ ನಿಗಮ ಮಾಡಿರುವ ನೆಡುತೋಪುಗಳಿಗೂ ವ್ಯತ್ಯಾಸ ನೀವು ಕಾಣಬಹುದು. ಕೆಲವು ಕಡೆ ನೆಡುತೋಪುಗಳೇ ಇಲ್ಲ. ಬೇಲಿ ಸರಿಯಾಗಿ ಮಾಡಲಿಲ್ಲ, ಬಾರ್ಡ್‌ವೈರ್ ಕೊಳ್ಳುವಲ್ಲಿ ಭ್ರಷ್ಟಾಚಾರ ನಡೆದಿದೆ. ಕಲ್ಲುಕಂಬ ಕೊಳ್ಳುವುದರಲ್ಲಿ ಭ್ರಷ್ಟಾಚಾರ ನಡೆದಿದೆ. ಶಿವಮೊಗ್ಗ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕೆಲವು ಅಧಿಕಾರಿಗಳ ಮೇಲೆ ಗುರುತರವಾದ ಆರೋಪಗಳಿವೆ. ಇವರ ಮೇಲೆ ನೀವೇನು ಕ್ರಮ ಕೈಗೊಂಡಿದ್ದೀರಿ? ಇದನ್ನು ಸರಿ ಮಾಡುವುದಕ್ಕೆ ನಿಮ್ಮ ಯೋಜನೆಗಳು ಏನು? ನೆಡುತೋಪುಗಳು ಹಾಳಾಗಿದ್ದಕ್ಕೆ ಯಾವ್ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೀರಿ ಎಂದು ಹೇಳಬೇಕು.

ಶ್ರೀ ಡಿ. ಮಂಜುನಾಥ್ :— ಮಾನ್ಯ ಅಧ್ಯಕ್ಷರೆ, ನಾನು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಮಾನ್ಯ ಜ್ಞಾನೇಂದ್ರರೂ ನನ್ನ ಜೊತೆಗಿದ್ದರು; ನೆಡುತೋಪುಗಳ ನಿರ್ವಹಣ ಅಧಿಕಾರಿಗಳ ಮೇಲೆ ಆರೋಪಗಳಿವೆ ಎಂದು ಅಂದಿದ್ದಾರೆ, ಅದರ ಬಗ್ಗೆ ಜನರೇ ಹಿಂದೆ ನನಗೊಂದು ಅರ್ಜಿ ಬರೆದಿದ್ದರು, ಈಗಾಗಲೇ ಅದರ ಬಗ್ಗೆ ವಿಚಾರಣೆ ಮಾಡಲಿಕ್ಕೂ ಸಹ ಹೇಳಿದ್ದೇನೆ. ಜೊತೆಗೆ ಏನಾದರೂ ನಿರ್ದಿಷ್ಟ ಆರೋಪಗಳಿದ್ದರೆ ನನಗೆ ಕಳಿಸಿ, ಖಂಡಿತ ಅದನ್ನು ನಾನು ವಿಚಾರಣೆ ಮಾಡಿ ಈ ವಿಭಾಗದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ :— ಮಾನ್ಯ ಅಧ್ಯಕ್ಷರೇ, ಈ ನೆಡುತೋಪುಗಳ ವಿಚಾರದಲ್ಲಿ ಬಹಳ ಪ್ರಯತ್ನವನ್ನು ನಿಗಮ ಮಾಡಿದ್ದರೂ ಕೂಡ ನೆಡುತೋಪು ಮಾಡುವ ಪ್ರದೇಶಗಳಲ್ಲಿ ಇವತ್ತಿಗೂ ಶಕ್ತಿವಂತರು ಬಗರ್‌ಹುಕುಂ ಮಾಡಿಕೊಂಡು ಬರುತ್ತಿದ್ದಾರೆ. ಏಕೆಂದರೆ ಬಗರ್‌ಹುಕುಂ ಭೂಮಿ ಉಳುಮೆ, ಸಮ ಮಾಡುವ ಸಂದರ್ಭದಲ್ಲಿ ದುರ್ಬಲರಿಗೆ ಅಷ್ಟು ಸುಲಭವಲ್ಲ, ಇದೇ ಕಾರಣಕ್ಕಾಗೇ ಬಹಳಷ್ಟು ಕಡೆ ನೆಡುತೋಪು ಮಾಡುತ್ತೇವೆ ಅಂತ ಹೇಳಿಕೊಂಡೇ, ಫೆನ್ಸಿಂಗ್ ಮಾಡುವಾಗ ಇರಬಹುದು, ಟ್ರೆಂಚಸ್ ಹೊಡೆಯುವಾಗ ಕೂಡ ಎಲ್ಲೋ ಅರ್ಧ ಎಕರೆ ಒಂದೆಕರೆ ಇದ್ದವನಿಗೆ ಅದನ್ನು ಒಳಗಡೆ ಹಾಕಿಕೊಳ್ಳುತ್ತಾರೆ. ಹತ್ತು ಹದಿನೈದು ಎಕರೆ ಮಾಡುವ ಸಂದರ್ಭದಲ್ಲಿ ಅದನ್ನು ಬಿಟ್ಟು ಆ ಕಡೆಗೆ ಹಾಕುತ್ತಾರೆ. ಆ ಬಗ್ಗೆ ಸ್ವಲ್ಪ ಜಾಗರೂಕತೆ ವಹಿಸಬೇಕು. ಹಾಗೇನೆ ನೆಡುತೋಪು ಮಾಡುವಾಗ ಊರಿನ ಜನರ ಸಹಕಾರ ಪಡೆದರೆ ಮಾಡಲು ಸಾಧ್ಯವಾಗುತ್ತದೆ, ಇಲ್ಲಾಂದರೆ ನಾವು ಕಾಡು ಬೆಳೆಸಬೇಕೆಂದು 15 ಪರ್ಸೆಂಟ್ ಬಡ್ಡಿ ತೆಗೆದುಕೊಂಡು ಇನ್ನೊಂದು ಕಡೆ ಇಲ್ಲದಿದ್ದವನಿಗೆ ಬಗರ್‌ಹುಕುಂಗೂ ಅವಕಾಶ ಕೊಡುವುದಿಲ್ಲ. ಬಗರ್‌ಹುಕುಂ ಇವತ್ತಿಗೂ ಅಧಿಕಾರಗಳ ಸಹಕಾರದಿಂದಲೇ ಆಗುತ್ತದೆ.

ಅಧ್ಯಕ್ಷರು :— ಇದು ಗುಡ್ ಸಜೆಶನ್.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಸಚಿವರು ಇಲ್ಲಿ ಕೊಟ್ಟಿರುವ ಉತ್ತರ ಸರಿಯಾಗಿ ನೋಡಬೇಕು. ಅದರಲ್ಲಿ ನನ್ನ ಮಾಹಿತಿ ಪ್ರಕಾರ 1998-99ರ ಸಾಲಿನ ನಿಮ್ಮ ಅಂಕಿಅಂಶ ಸರಿಯಲ್ಲ. ಎರಡನೆಯದು ರಾಜ್ಯದೆಲ್ಲೆಡೆ ನೆಡುತೋಪು ವ್ಯವಹಾರದಲ್ಲಿ ನಿಗಮ ಗೊಬ್ಬರ ಹಾಕದೆ ಫೆನ್ಸಿಂಗ್ ಮಾಡದೆ ಬಿಲ್ ಪಡೆದಿರುವ ಹತ್ತಾರು ಉದಾಹರಣೆ ಕೊಡಬಲ್ಲೆ. ನಾನು ನಿಮಗೆ ಒಂದು ಮಾತನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ; ಇವತ್ತು ಶಿವಮೊಗ್ಗ ಜಿಲ್ಲೆ ಬಗ್ಗೆ ತಾವು ಸ್ಪೆಸಿಫಿಕ್ ಆಗಿ ಹೇಳಿದ್ದೀರಿ. ಇವತ್ತು ಒಟ್ಟು 1665 ಹೆಕ್ಟೇರ್‌ನಲ್ಲಿ ನೆಡುತೋಪು ಮಾಡಿದ್ದೇವೆ ಎಂದು ಹೇಳುತ್ತೀರಿ. ನಾನು ನಿಮಗೆ ಹೇಳುತ್ತೇನೆ, ತಾವು ಇದುವರೆಗೂ ಎಲ್ಲಾದರೂ ಸರ್‌ಪ್ರೈಸ್ ವಿಸಿಟ್ ಮಾಡಿದ್ದೀರಾ? ಇವತ್ತು ನೀವು ಶಿವಮೊಗ್ಗ ಜಿಲ್ಲೆಗೆ ಬಂದರೆ 1665 ಹೆಕ್ಟೇರ್‌ನಲ್ಲಿ ಒಂದು ಸಾವಿರ ಹೆಕ್ಟೇರನ್ನು ನೆಡುತೋಪು ಮಾಡಿರುವುದನ್ನು ತೋರಿಸಿಬಿಡಿ. ನೆಡುತೋಪು ಮಾಡದೇ ಬಿಲ್ ಮಾಡಿರುವುದುಂಟು. ಅದು ಮೆಯಿನ್‌ಟೈನ್ ಮಾಡುತ್ತಿಲ್ಲ; ಗೊಬ್ಬರವನ್ನೂ ಮಾರಿಕೊಳ್ಳುತ್ತಿದ್ದಾರೆ. ಈ ರೀತಿ ಅವ್ಯವಹಾರಗಳೆಲ್ಲಾ ನಡೆಯುತ್ತಿವೆ. ತಾವು ಎಲ್ಲಾದರೂ ಸರ್‌ಪ್ರೈಸ್ ವಿಸಿಟ್ ಮಾಡುತ್ತೀರಾ? ಅಥವಾ ಅಧ್ಯಕ್ಷರು ತಾವೇನಾದರೂ ಒಂದು ಸದನದ ಸಮಿತಿ ಮಾಡಿ ಎಲ್ಲಾದರೂ ಘಟನೆ ನಡೆದ ಬಗ್ಗೆ ಹೋಗಿ ನೋಡಿ ಬರಲು ವ್ಯವಸ್ಥೆ ಮಾಡುತ್ತೀರಾ? ಏಕೆಂದರೆ ಕೋಟ್ಯಾಂತರ ರೂಪಾಯಿಗಳ ಖರ್ಚು ಮಾಡಿ ಹದಿನಾಲ್ಕೂವರೆ ಪರ್‌ಸೆಂಟ್ ಬಡ್ಡಿಯನ್ನು ತುಂಬುತ್ತಿದ್ದೇವೆ.

ಅಧ್ಯಕ್ಷರು :— ಸದನದ ಸಮಿತಿ ಮಾಡಲು ಇನ್ನೆಲ್ಲಿ ಟೈಮ್ ಇದೇ?

ಶ್ರೀ ಬಿ.ಎಸ್. ಯಡಿಯೂರಪ್ಪ ತಮ್ಮ ಅನುಭವ ಏನು? ತಾವು ಎಲ್ಲಾದರೂ ಸರ್‌ಪ್ರೈಸ್ ವಿಸಿಟ್ ಮಾಡಿದ್ದೀರಾ? ಅದನ್ನು ನೋಡಿದ್ದೀರಾ? ನನ್ನ ಜಿಲ್ಲೆಗೆ ಬನ್ನಿ, ಶಿಕಾರಿಪುರ ತಾಲ್ಲೂಕಿಗೆ ಬನ್ನಿ. ನ್ನು ನಿಮಗೆ ತೋರಿಸುತ್ತೇನೆ. ನೆಡು ತೋಪುಗಳನ್ನು ಮಾಡದೆ ಬಿಲ್‌ಗಳನ್ನು ಮಾಡಿಕೊಂಡಿರುವಂಥಾದ್ದು ಇದೆ.

ಶ್ರೀ ಡಿ. ಮಂಜುನಾಥ್ (ಮಾನ್ಯ ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೇ, ನಾನು ತೀರ್ಥಹಳ್ಳಿ ತಾಲ್ಲೂಕಿಗೆ ಹೋಗಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಅವರು ಎಲ್ಲೆಲ್ಲಿ ಮಾಡಿದ್ದಾರೆ, ಅದನ್ನು ನೋಡಿಕೊಂಡು ಬಂದಿದ್ದೇನೆ. ಅದರಲ್ಲೂ ಕೆಲವು ಲೋಪದೋಷಗಳಾಗಿವೆ; ನಾನು ಇಲ್ಲ ಎಂದು ಹೇಳುವುದಿಲ್ಲ. ಈಗ ಏನಾಗಿದೆ, ಕೆಲವು ಆರೋಪಗಳು ಬಂದಿವೆ. ಅದನ್ನು ನಾನು ತನಿಖೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇನೆ. ಅವರು ಕೇಳಿರುವ ಪ್ರಶ್ನೆ ಜನರಲ್ ಆಗಿ ಕೇಳಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಪ್ರದೇಶದಲ್ಲಿ ನೆಡುತೋಪುಗಳನ್ನು ಮಾಡಿರುವ ಬಗ್ಗೆ ಅರಣ್ಯಾಭಿವೃದ್ಧಿ ನಿಗಮ ಏನಿದೆಯೋ, ಇದನ್ನು ಕೆಲವು ಕಡೆ ಮಾಡಿದ್ದಾರೆ. ಕೆಲವು ಲೋಪದೋಷಗಳು ಇವೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ನಾನು ನೋಡಿ ಬಂದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಕೋಟ್ಯಾಂತರ ರೂಪಾಯಿಗಳ ಸಾಲ ತೆಗೆದುಕೊಂಡು ಅದಕ್ಕೆ ಹದಿನಾಲ್ಕುವರೆ ಪರ್‌ಸೆಂಟ್ ಬಡ್ಡಿಕೊಟ್ಟು ಅದನೆಲ್ಲಾ ಮಾಡುತ್ತಿದ್ದಾರೆ. ತಮಗೆ ಗೊತ್ತಿದೆ, ಮಲೆನಾಡಿನಲ್ಲಿ ದಟ್ಟವಾದ ಅರಣ್ಯ ಇದೆ; ಅದು ಲೂಟಿಯಾಗುತ್ತಿದೆ. ಹೊಸ ಅರಣ್ಯ ಬೆಳೆಸುವ ಹಾಗೆ ಇಲ್ಲ; ಇರುವುದನ್ನು ಮೈನ್‌ಟೈನ್ ಮಾಡಬೇಕು. ನಾನು ಹೇಳುತ್ತಿದ್ದೇನೆ, 1665 ಹೆಕ್ಟೇರ್‌ನಲ್ಲಿ ಇದೊಂದು ಜಿಲ್ಲೆಯನ್ನು ತಾವು ಸರ್‌ಪ್ರೈಸ್ ವಿಸಿಟ್ ಮಾಡಿ. ತೀರ್ಥಹಳ್ಳಿ, ಶಿವಮೊಗ್ಗ, ಸಾಗರ, ಸೊರಬ, ಹೊಸನಗರ ಮತ್ತು ಶಿಕಾರಿಪುರಕ್ಕೆ ಬನ್ನಿ. ನಾವು ನಿಮ್ಮ ಜೊತೆಗೆ ಬರುತ್ತೇವೆ. ಒಂದು ದಿವಸ ನೀವೂ ಬನ್ನಿ. ಇವತ್ತು ಒಂದು ಸಾವಿರ ಹೆಕ್ಟೇರ್‌ನಷ್ಟೂ ಮಾಡಿಲ್ಲ, ಬಿಲ್ ಡ್ರಾ ಮಾಡಿ ಹಣದ ಲೂಟಿ ನಡೆಸಿದ್ದಾರೆ. ನೀವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದರೆ ನಾವೇನು ಮಾಡಬೇಕು? ದಯವಿಟ್ಟು ಬನ್ನಿ.

ಶ್ರೀ ಡಿ. ಮಂಜುನಾಥ್ :— ತಾವು ಒಳ್ಳೆಯ ಸಲಹೆ ಕೊಟ್ಟಿದ್ದೀರಿ. ಈ ಅಧಿವೇಶನ ಮುಗಿದಮೇಲೆ ಒಂದು ದಿವಸವಲ್ಲ, ಎರಡು ದಿವಸವಲ್ಲ, ಒಂದು ವಾರವಾದರೂ ಸಹ ಬರುತ್ತೇನೆ.

ಶ್ರೀ ಆರ್.ಜಿ. ವೆಂಕಟಾಚಲಯ್ಯ :— ಮಾನ್ಯ ಅಧ್ಯಕ್ಷರೇ, ಅರಣ್ಯ ಇಲಾಖೆಯವರು ಬಹಳ ಮುತುವರ್ಜಿವಹಿಸಿ ನೆಡುತೋಪುಗಳನ್ನು ಮಾಡಿದ್ದಾರೆ. ಅಲ್ಲಿ ಮರಗಳು ಬಂದಿವೆ. ಅದಕ್ಕೆ ಸರಿಯಾದ ಕಾವಲು ಯಾರೂ ಇಲ್ಲ. ಎಲ್ಲರೂ ಮರಗಳನ್ನು ಕಡಿದುಕೊಂಡು ಹೋಗುತ್ತಿದ್ದಾರೆ. ವ್ಯವಸಾಯಕ್ಕೆ ಏನು ಬೇಕೊ ಅದನ್ನು ಮಾಡಿಕೊಳ್ಳುತ್ತಿದ್ದಾರೆ. ಯಾರು ಕೇಳುವವರು ಇಲ್ಲ. ಅದನ್ನು ಪಂಚಾಯಿತಿಗೂ ವಹಿಸಿಲ್ಲ.; ಇಲವೇ ಇಲಾಖೆಯವರು ನೋಡಿಕೊಳ್ಳುತ್ತಿಲ್ಲ. ದಯವಿಟ್ಟು ಅದರ ಕಡೆ ಗಮನವನ್ನು ಹರಿಸಬೇಕೆಂದು ನಾನು ತಿಳಿಸಿಕೊಳ್ಳುತ್ತೇನೆ. ಎರಡನೆಯದು, ಬಹಳ ವರ್ಷಗಳಿಂದ ರೈತರು ಅರಣ್ಯ ಭೂಮಿಯನ್ನು 20-30 ವರ್ಷಗಳಿಂದ ಉಳುಮೆ ಮಾಡುತ್ತಿದ್ದೇವೆ, ಇವತ್ತು ಟ್ರೆಂಚ್ ಹೊಡೆಯುವುದಕ್ಕೆ ಹೋಗಿದ್ದಾರೆ. ರೈತರೆಲ್ಲಾ ಬಂದು ನಮ್ಮನ್ನು ಕೇಳುತ್ತಿದ್ದಾರೆ. ಏಕೆ ಸ್ವಾಮಿ, ನಾವು 30 ವರ್ಷದಿಂದ ಉಳುಮೆ ಮಾಡುತ್ತಿದ್ದೇವೆ, ಇವತ್ತು ಟ್ರೆಂಚ್ ಹೊಡೆಯುತ್ತಿದ್ದಾರೆ ಎಂದು ಹೇಳುತ್ತಾರೆ. ದಯವಿಟ್ಟು ಯಾರು 30 ವರ್ಷದಿಂದ ಉಳುಮೆ ಮಾಡುತ್ತಿದ್ದಾರೋ, ಅದು ಗೊತ್ತೋ ಇಲ್ಲವೋ ಅಥವಾ ಅರಣ್ಯ ಇಲಾಖೆ ಜಮೀನು ಎಂದು ಸರಿಯಾಗಿ ಗೊತ್ತಿಲ್ಲದೆ ಅವರುಗಳು ಮಾಡುತ್ತಿದ್ದಾರೆ. ತಮ್ಮ ಇಲಾಖೆಯವರು ಹೋಗಿ ಅಲ್ಲಿ ಟ್ರೆಂಚ್ ಹೊಡಿದು ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಯಾರು 20-30 ವರ್ಷದಿಂದ ಅರಣ್ಯ ಭೂಮಿಯನ್ನು ಉಳುಮೆ ಮಾಡಿದ್ದಾರೆ ಅಂಥವರಿಗೆ ತಾವು ತೊಂದರೆ ಕೊಡದೆ ಸೂಕ್ತ ನಿರ್ದೇಶನವನ್ನು ಕೊಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಡಿ. ಮಂಜುನಾಥ್ :— ಮಾನ್ಯ ಅಧ್ಯಕ್ಷರೇ, ಈಗ ಈ ಪ್ರಶ್ನೆಗೆ ಸಂಬಂಧಪಡದಿದ್ದರೂ ಸಹಾ ಎಲ್ಲೆಲ್ಲಿ ನಿರ್ದಿಷ್ಟವಾಗಿ ಆ ರೀತಿ ಮಾಡಿದ್ದಾರೆ, ಅದನ್ನು ಅವರು ಕೊಟ್ಟರೆ ನಾನು ವಿಚಾರಣೆ ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ :— ಈ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಕೆಪಿಸಿಎಲ್‌ನ ಜಮೀನು ಕೂಡ ಹಸ್ತಾಂತರವಾಗಿದೆ. ಸಾವಿರ ಹೆಕ್ಟೇರ್‌ಗಳಷ್ಟು ಜಮೀನು ಇವತ್ತಿಗೂ ಕೂಡ ಹಾಗೆಯೇ ಬಿದ್ದಿದೆ. ಅನೇಕ ಖಾಸಗಿಯವರು ಅದನ್ನು ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ. ಈ ನಿಗಮಕ್ಕೆ ಆರ್ಥಿಕವಾಗಿ ಇನ್ನೊಂದಷ್ಟು ಚೈತನ್ಯ ಕೊಡಿ. ಏಕೆಂದರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಕೆಲವರು ಅತ್ಯಂತ ಭ್ರಷ್ಟರಿದ್ದಾರೆ. ಅವರನ್ನು ಬದಲಾವಣೆ ಮಾಡಬೇಕು. ಅವರಿಗೆ ಶಕ್ತಿಕೊಟ್ಟು ಅದಷ್ಟು ಜಮೀನು ಸಾಗುವಳಿ ಮಾಡುವ ಕಡೆಗೆ ನಿಮ್ಮ ಗಮನವನ್ನು ಕೊಡದೆ ಹೋದರೆ ಅದು ಅಭಿವೃದ್ಧಿ ಆಗುವುದಿಲ್ಲ. ಇಲ್ಲದಿದ್ದರೆ ಅರಣ್ಯಾಭಿವೃದ್ಧಿ ನಿಗಮವನ್ನು ಮುಚ್ಚಿ.

ಅಧ್ಯಕ್ಷರು :— ಮಾನ್ಯ ಅರಗ ಜ್ಞಾನೇಂದ್ರರವರೇ, ಭ್ರಷ್ಟಾಚಾರದಲ್ಲಿ ತೊಡಗಿರುವವರ ಮೇಲೆ ಕೇಸ್ ಹಾಕಿ, ಆ ಭ್ರಷ್ಟಾಚಾರದ ಆರೋಪ ರುಜುವಾತಾಗಿ ಅವರಿಗೆ ಶಿಕ್ಷೆಯಾಗದ ಹೊರತು ಅವರು ಸರ್ವಿಸ್‌ನಲ್ಲಿದ್ದರೆ ಅವರೆಲ್ಲರೂ ಪ್ರಾಮಾಣಿಕರೆಂತಲೇ ಲೆಕ್ಕ. ಈಗ ಯಾರ್ಯಾರೆಲ್ಲ ಸರ್ವಿಸ್‌ನಲ್ಲಿದ್ದು ಪ್ರತಿ ತಿಂಗಳು ಸಂಬಳ ತೆಗೆದುಕೊಳ್ಳುತ್ತಾರೆ, ಸರ್ವೀಸ್ ರೂಲ್ಸ್ ಪ್ರಕಾರ ಅವರೆಲ್ಲರೂ ಪ್ರಾಮಾಣಿಕರೇ-ಹೌದಲ್ಲವೇ ಮಂಜೂನಾಥ್‌ರವರೇ! ಈಗ ಯಾರು ಪ್ರಾಮಾಣಿಕರು, ಯಾರು ಅಪ್ರಾಮಾಣಿಕರು ಎಂದು ನಿಮ್ಮ ಹತ್ತಿರ ಪಟ್ಟಿ ಇದ್ದರೆ ಕೊಡಿ. ಅಲ್ಲವೇ ಯಡಿಯೂರಪ್ಪನವರೇ, ಮುಂದಿನ ಸಮಸ್ಯೆ ನಿಮಗೂ ಎದುರಾಗಲಿದೆ.

ಶ್ರೀ ಅರಗ ಜ್ಞಾನೇಂದ್ರ :— ಇದೊಂದು ವಿಚಿತ್ರವಾಗಿರುವ ಪರಿಸ್ಥಿತಿ, ಈ ನಿಗಮಕ್ಕೆ ಇದೆ. ಎಲ್ಲಿಯೂ ಸಲ್ಲದವರು ಇಲ್ಲಿ ಸಲ್ಲುತ್ತಾರೆ. ಈ ನಿಗಮದಲ್ಲಿ, ಒಬ್ಬರು ಎಂ.ಡಿ.ಯವರು ಇದ್ದಾರೆ. ಅವರು ಬಹಳ ಹಾನೆಸ್ಟ್ ಇದ್ದಾರೆ. ಅವರ ಬಗ್ಗೆ ನಮ್ಮದೇನೂ ಚಕಾರವಿಲ್ಲ. ಅವರನ್ನೇ ಹಿಡಿದು ಅಲ್ಲಾಡಿಸುತ್ತಾರೆ ಉಳಿದಿರತಕ್ಕಂಥವರು. ಅವರನ್ನು ಸ್ವಲ್ಪ ಅಲ್ಲಿ ಇಲ್ಲಿ ಬದಲಾಯಿಸಿ.

ಅಧ್ಯಕ್ಷರು :— ಯಾವ ನಿಗಮ? ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್.

ಶ್ರೀ ಅರಗ ಜ್ಞಾನೇಂದ್ರ :— ಅದು ಬಹಳ ದೊಡ್ಡ ನಿಗಮ; ಬಹಳ ಕೆಲಸ ಮಾಡಬೇಕಾದ ಒಂದು ನಿಗಮ.

ಶ್ರೀ ಡಿ. ಮಂಜುನಾಥ್ :— ಈಗಾಗಲೇ ನೀವು ಅವರನ್ನು ಬದಲಾಯಿಸಿದ್ದೇವೆ. ಆಮೇಲೆ ಕೆಲವರ ಬಗ್ಗೆ ಕ್ರಮ ತೆಗೆದುಕೊಂಡು ಸಸ್ಪೆಂಡ್ ಮಾಡಿದ್ದೇನೆ. ಈಗ ನೀವು ನಿರ್ದಿಷ್ಟವಾಗಿ ಏನಾದರೂ ಕೇಸ್ ಇದ್ದರೆ ಈಗಲೂ ಆ ಬಗ್ಗೆ ನನಗೆ ಕಾಗದವನ್ನು ಬರೆಯಿರಿ. ನಾನು ಈಗ ಯಡಿಯೂರಪ್ಪನವರಿಗೆ ಹೇಳಿದ್ದೇನೆ. ಈ ಅಧಿವೇಶನ ಮುಗಿದ ಮೇಲೆ ನಾನು ಶಿವಮೊಗ್ಗ ಜಿಲ್ಲೆಗೆ ಬರುತ್ತೇನೆ, ನಿಮ್ಮವೆಲ್ಲಾ ಕರೆಸುತ್ತೇನೆ. ಅಲ್ಲಿಗೆ ನಾವೆಲ್ಲರೂ ಹೋಗಿ ಒಂದು ವೀಕ್ಷಣೆಯನ್ನೂ ಮಾಡೋಣ.